# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1062 |
| ಮಾನ್ಯ ಸದಸ್ಯರ ಹೆಸರು | : | ಡಾ. ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 17.03.2025 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | 2020 ರಿಂದ 2024 ರವರೆಗೆ ರಾಜ್ಯದಲ್ಲಿರುವ ಪ್ರಕಾಶಕರಿಂದ ಗುಣಮಟ್ಟದ ಪುಸ್ತಕ ಖರೀದಿಸಿ ಗ್ರಂಥಾಲಯಗಳಿಗೆ ನೀಡುವ ಸಲುವಾಗಿ ಈ 05 ವರ್ಷಗಳಲ್ಲಿ ಉತ್ತಮ ಪುಸ್ತಕಗಳನ್ನು ಆಯ್ಕೆ ಸಮಿತಿ ಆಯ್ಕೆ ಮಾಡಿ ಸರ್ಕಾರಕ್ಕೆ ಅಂತಿಮ ಪಟ್ಟಿ ಸಲ್ಲಿಸಲಾಗಿದೆಯೇ; | ಹೌದು |
| (ಆ) | ಸಮಿತಿ ಸಲ್ಲಿಸಿದ ಅಂತಿಮ ಪಟ್ಟಿಯನ್ನು ಸರ್ಕಾರ ಅನುಮೋದಿಸಲಾಗಿದೆಯೇ; ಅನುಮೋದಿಸದಿದ್ದಲ್ಲಿ ಯಾವಾಗ ಅನುಮೋದನೆ ನೀಡಲಾಗುವುದು. | 2021ರಲ್ಲಿ ಮುದ್ರಣಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯು ಅನುಮೋದನೆಗಾಗಿ ಸಲ್ಲಿಕೆಯಾಗಿದ್ದು, ಪರಿಶೀಲನೆಯಲ್ಲಿದೆ. |
| (ಇ) | ಈ ವರ್ಷದ ಎಲ್ಲಾ, ಜಿಲ್ಲಾ ಮತ್ತು ನಗರ ಗ್ರಂಥಾಲಯಗಳ ಆಯವ್ಯಯ ಹಾಗೂ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆಯೇ | ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 30 ಜಿಲ್ಲಾ ಕೇಂದ್ರ ಹಾಗೂ 26 ನಗರ ಕೇಂದ್ರ ಗ್ರಂಥಾಲಯಗಳಿದ್ದು, ಅವುಗಳ ಪೈಕಿ ಇದುವರೆಗೆ 29 ಜಿಲ್ಲಾ ಕೇಂದ್ರ ಹಾಗೂ 23 ನಗರ ಕೇಂದ್ರ ಗ್ರಂಥಾಲಯಗಳ 2024-25ನೇ ಸಾಲಿನ ಪ್ರಾಧಿಕಾರ ನಿಧಿಯ ಆಯ-ವ್ಯಯ ಹಾಗೂ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. |

..2

| | | |
|---|---|---|
| | | ಉಳಿದ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಪ್ರಾಧಿಕಾರ ನಿಧಿಯ ಆಯ-ವ್ಯಯ ಹಾಗೂ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಸಂಬಂಧದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| (ಈ) | ಅಂತಿಮ ಪುಸ್ತಕ ಆಯ್ಕೆ ಪಟ್ಟಿ ಅನುಮೋದನೆ ವಿಳಂಬವಾದರೆ, ಈ ವರ್ಷದ ಪುಸ್ತಕ ಖರೀದಿಗೆ ಅನಾನುಕೂಲವಾಗುವುದಿಲ್ಲವೇ? | ಸರ್ಕಾರದ ಆದೇಶ ಸಂಖ್ಯೆ: ಇಡಿ 01 ಎಲ್‌ಬಿಪಿ 2004, ದಿನಾಂಕ 07.02.2005ರ, ಅನುಬಂಧ-02 ರನ್ವಯ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಗೆ ಅನುಮೋದನೆ ನೀಡಿದ ದಿನಾಂಕದಿಂದ 02 ವರ್ಷಗಳ ಅವಧಿಗೆ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. |

**ಸಂಖ್ಯೆ: ಇಪಿ/ 40 /ಎಲ್‌ಐಬಿ/2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು